ಶ್ರೀ ವಿ. ಆರ್. ನಾಯ್ಡು.—ಜನಗಳಿಂದ ಮನವಿ ಬಂದರೆ ಜಾಗ್ರತೆ ಅದನ್ನು ಪರಿತೀಲನೆ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಜನಗಳಿಂದ ಮನವಿ ಬಂದರೆ Corporationಗೆ ಕಳುಹಿಸಿ ಕೊಟ್ಟು ಅದನ್ನು consider ಮಾಡುವಹಾಗೆ ಹೇಳುತ್ತೇವೆ.

Sites for Government Servants in Vyalikaval

Q.—914. Sri N. HUCHMASTHYGOWDA (Huliyurdurga).—

Will the Government be pleased to state:—

(*a*) the number of Government servants that have requested for the grant of house building sites in Vyalikaval;

(*b*) of them the number that have deposited the amount;

(*c*) when the amounts were deposited;

(*d*) the arrangements made for the grant of sites to them?

A.—Sri T. CHANNIAH (Minister for Public Health and Local Self-Government).—

(*a*) 120.
(*b*) 44.
(*c*) 41 in 1951 and 3 during 1954.
(*d*) 60 sites allotted.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ದುಡ್ಡು ಕೊಟ್ಟಿರುವುದು ಕೋದಂಡರಾಮಪುರಂ Co-operative Society ಮುಖಾಂತರವಲ್ಲವೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸೊಸೈಟಿಯವರು ಸೈಟು ವಿಂಗಡಿಸಿ ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ Trust Board ಸೈಟನ್ನು ನೇರವಾಗಿ ವಿಂಗಡಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—Trust Board site ಗಳನ್ನು Layout ಮಾಡಿ ಅವರೇ ವಿಲೇವಾರಿ ಮಾಡಬೇಕೆಂಬುದಾಗಿ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸೈಟುಗಳನ್ನು ಕೊಡುವಾಗ 120 ಜನರಿಗೆ ದುಡ್ಡು ಕೊಡದೆ ಇರುವುದಕ್ಕೆ ಸೊಸೈಟಿ ಮುಖಾಂತರ ಅಥವಾ Trust Board-ಮುಖಾಂತರ ನೋಟೀಸ್ ಕೊಟ್ಟಿದೆಯೇ?

ಶ್ರೀ ಟಿ. ಚನ್ನಯ್ಯ.—60 ಜನರಿಗೆ ಸೈಟುಗಳನ್ನು ಕೊಡಬೇಕೆಂಬುದಾಗಿ ತೀರ್ಮಾನ ಮಾಡಿದವರ ಪೈಕಿ 44 ಮಂದಿ ಮಾತ್ರ ಹಣ ಕೊಟ್ಟಿದ್ದಾರೆ. ಬಾಕಿ ಜನ ಹಣ ಕೊಡದೆ ಇರುವುದರಿಂದ ಉಳಿದವರಿಗೆ ಸೈಟು ಕೊಡಲಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬಾಕಿ ದುಡ್ಡನ್ನು ಕೊಡುವುದಕ್ಕೆ ನೋಟೀಸ್ ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—Trust Board ನವರು ಸೈಟ್ allotment ಮಾಡಿದ ತಕ್ಷಣ ದುಡ್ಡು ಕೊಡಬೇಕೆಂದು ನೋಟೀಸ್ ಕೊಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಉಳಿದಿರತಕ್ಕಂಥ ಒಟ್ಟು 120 ಜನರಿಗೂ ಒಂದೇ ಕಡೆ Colony ಮಾಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಸೈಟುಗಳು ಅದೇ ಜಾಗದಲ್ಲಿ ಇದ್ದ ಪಕ್ಷದಲ್ಲಿ ಏರ್ಪಾಟು ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

Huliyur Village Panchayet (Conversion into Municipality)

Q.—923. Sri C. H. LINGADEVARU (Chiknaikanahalli).—

Will the Government be pleased to state:—

(*a*) since when the Village Panchayet and people of Huliyur, Chiknaikanahalli Taluk, have been asking for the conversion of the village into a municipality;

(*b*) whether correspondence is not going on in the matter;

(*c*) at what stage it is and where does it stand now?

A.—Sri T. CHANNIAH (Minister for Public Health and Local Self-Government).—

(*a*) Since December 1952.
(*b*) Yes,
(*c*) The receipt of information about the limits of the local area of the proposed Municipality called for from the Commissioner for Local Self-Government is awaited.

ಶ್ರೀ ಸಿ. ಎಚ್. ಲಿಂಗದೇವರು.—ಮೂರು ವರ್ಷಗಳಿಂದ ನಾವಕಾಶವಾಗಲು ಕಾರಣವೇನು?

ಶ್ರೀ ಟಿ. ಚನ್ನಯ್ಯ.—ರೆವಿನ್ಯೂ ಇಲಾಖೆಯವರು ಮತ್ತು L. S. G. Commissionerರವರು ಸ್ಥಳವನ್ನು ನೋಡಿ Area fix ಮಾಡಿ Town Municipal Council Limit ಎಷ್ಟು ಇರಬೇಕು ಎಂಬುದನ್ನು survey ಮಾಡಬೇಕು. ಎಷ್ಟು Area ಸೇರಿಸಿಕೊಳ್ಳಬೇಕು ಎಂಬ ವಿಷಯವನ್ನೆಲ್ಲಾ ಆಫೀಸರ್ ಅವರು ಮಾಡಬೇಕು. ರೆವಿನ್ಯೂ ಇಲಾಖೆಯವರು ಮಲೆನಾಡು ಎಷ್ಟು Area ಸೇರಿಸಬೇಕು ಎಂಬ ವಿಷಯದಲ್ಲಿ ಕಮಿಷನರ್ ಅವರಿಗೆ ಬರೆದಿದ್ದಾರೆ. ಅವರು ಅಲ್ಲಿ ಹೋಗಿ ಇಷ್ಟೇ Area ಸೇರಿಸಬೇಕು ಎಂದು limit fix ಮಾಡಬೇಕು. ಅವರು ಸ್ಥಳಕ್ಕೆ ಹೋಗಿ ಅವರಿಂದ ಸರ್ಕಾರಕ್ಕೆ ವರದಿ ಬಂದನಂತರ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಒಂದು ವಿಷಯದಲ್ಲಿ 1-1½ ವರ್ಷ ಕಾಗದ ಪತ್ರ ಕದಲದೆ ಕುಳಿತಿರುವುದು ಗೊತ್ತಿದೆಯೇ?